## ಸಂಪಾದಕೀಯ

# ಮತಾಂಧತೆಯ ಪಿಡುಗು

ಸಂಕುಚಿತ ಧಾರ್ಮಿಕ ಭಾವನೆಗಳು ಹಾಗು ಇತರ ಧರ್ಮಗಳನ್ನು ಕುರಿತು ದ್ವೇಷ, ತಾತ್ಸಾರ – ಇವು ನಮ್ಮನ್ನು ಇಂದು ಕಾಡುತ್ತಿರುವ ಪ್ರಮುಖ ಸಮಸ್ಯೆಗಳು. ಕಳೆದ ನಾಲ್ಕು ಶತಮಾನಗಳಲ್ಲಿ ಮಾನವನು ಕಂಡ ವಿಜ್ಞಾನದ ವಿಸ್ಮಯಕಾರೀ ಅಭಿವೃದ್ಧಿಯಿಂದ, ವೈಚಾರಿಕತೆ ಪ್ರಬಲಗೊಂಡು ಮತಾಂಧತೆ ಕಡಿಮೆಯಾದೀತೆಂಬ ಆಶಾಭಾವನೆ ಎಲ್ಲ ಚಿಂತಕರಲ್ಲೂ ತಲೆದೋರಿತ್ತು. ಮನುಷ್ಯನು ತನ್ನ ಸ್ಥಿತಿಗತಿಗಳನ್ನು ಉತ್ತಮಗೊಳಿಸುವತ್ತ ದೃಷ್ಟಿ ಹಾಯಿಸಿದಾಗ, ಧಾರ್ಮಿಕ ನಂಬಿಕೆಗಳ ಬಗ್ಗೆ ಅವನಲ್ಲಿದ್ದ ದುರಭಿಮಾನವು ಕ್ರಮೇಣ ಕಡಿಮೆಯಾಗುವುದೆಂದು ಅನೇಕ ಸಮಾಜ ಸುಧಾರಕರೂ ಭಾವಿಸಿದ್ದರು.

ಜಾಗತಿಕ ಇತಿಹಾಸ ಹಾಗೂ ಇತರ ಸಂಸ್ಕೃತಿಗಳ ಸಾಧನೆಗಳನ್ನು ಶಿಕ್ಷಣದ ಮೂಲಕ ಪರಿಚಯಿಸುವ ಮೂಲಕ ಸಹನಶೀಲ ಸಮಾಜವನ್ನು ನಿರ್ಮಿಸುವ ಕನಸನ್ನು ಕಂಡಿದ್ದ ಶಿಕ್ಷಣ ತಜ್ಞರೂ ಈಗ ನಿರಾಸೆಗೆ ಬಲಿಯಾಗುತ್ತಿದ್ದಾರೆ. ಹೊಸ ಹೊಸ ವಿಧಾನಗಳಿಂದ ಮತಿಹೀನ ಕ್ರೌರ್ಯಗಳಲ್ಲಿ ತೊಡಗುತ್ತಿರುವ ಆಧುನಿಕ ಆತಂಕವಾದಿಗಳಿಗೆ ಶಿಕ್ಷಣದ ಕೊರತೆಯಂತೂ ಇಲ್ಲ, ಅವರಿಗೆ ದೊರೆಯುತ್ತಿರುವುದು ಮತಭ್ರಾಂತಗೊಳಿಸುವ ಬೋಧನೆ. ಶಿಕ್ಷಣವನ್ನು ರಾಜಕೀಯದೊಂದಿಗೆ ಬೆರೆಸುವುದರ ಮೂಲಕ ಮತ್ತೊಂದು ದೇಶ ಅಥವಾ ಜನಾಂಗದ ಆರ್ಥಿಕ ವ್ಯವಸ್ಥೆಯನ್ನೇ ಶಿಥಿಲಗೊಳಿಸುವ ಕುತಂತ್ರವನ್ನು ಅನೇಕ ರಾಷ್ಟ್ರಗಳು ಅನುಸರಿಸುತ್ತಿವೆ ಎಂಬುದು ಸರ್ವವಿದಿತ.

ವಾಣಿಜ್ಯ ಜಗತ್ತಿನ ಆಕರ್ಷಣೆಗಳ ಹಾಗೂ ಹೊಸ ಹೊಸ ರಾಜನೀತಿಗಳ ಮೂಲಕವೂ ಧರ್ಮದಲ್ಲಿನ ಅಂಧಾಭಿಮಾನವನ್ನು ಹೋಗಲಾಡಿಸುವ ಪ್ರಯತ್ನವೂ ಎಲ್ಲೆಡೆ ನಡೆಯಿತು. ಆದರೂ, ಎಲ್ಲ ಧರ್ಮಗಳಲ್ಲೂ ತಮ್ಮ ತಮ್ಮ ನಂಬಿಕೆಗಳೇ ಶ್ರೇಷ್ಠವೆನ್ನುವ ಧೋರಣೆ ಮತ್ತಷ್ಟು ಆಳವಾಗಿ ಬೇರೂರುತ್ತಿರುವುದು ಇಂದಿನ ವಿಪರ್ಯಾಸ. ಪ್ರತಿನಿತ್ಯವೂ ಬೀಭತ್ಸ ಚಿತ್ರಗಳೊಂದಿಗೆ ಅಮಾನುಷ ಹತ್ಯೆಗಳನ್ನು ವರದಿ ಮಾಡುವ ದಿನಪತ್ರಿಕೆಗಳನ್ನು ಕಂಡಾಗ ಮಾನವನು ಏನಾದರೂ ಪ್ರಗತಿ ಸಾಧಿಸಿರುವನೆ? ಧರ್ಮವು ಸಮಾಜದ ಅಭಿವೃದ್ಧಿಗೆ ಪೂರಕವೆ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡಲು ಪ್ರಾರಂಭಿಸುತ್ತವೆ. ತಮ್ಮ ಧರ್ಮಕ್ಕೆ, ಅದರಲ್ಲೂ ಆಯಾ ಪಂಗಡಕ್ಕೆ, ಸೇರಿದವರನ್ನು ಮಾತ್ರ ಪ್ರೀತಿಸುತ್ತ, ಇತರರನ್ನು ಕೀಳಾಗಿ ಕಾಣುವವರು ದೇವರ ಸಾಮರ್ಥ್ಯಕ್ಕೆ, ವಿಶಾಲತೆಗೆ ಅಪಚಾರವೆಸಗುತ್ತಾರಷ್ಟೆ. ದೇವರನ್ನು ತಮ್ಮ ಖಾಸಗಿ ಸ್ವತ್ತು ಎಂದು ಭಾವಿಸುತ್ತ ತಮ್ಮ ಅಭಿಪ್ರಾಯಗಳೇ ಸತ್ಯ ಎಂದು ಪ್ರತಿಪಾದಿಸುವ ಇವರ ಮನಸ್ಸಿನ ವಿಕೃತ ಚಿಂತನೆಗಳ ಬಗ್ಗೆ ಎಲ್ಲರೂ ತಿಳಿಯುವುದು ಅತ್ಯಗತ್ಯ. ಆಗ ಮಾತ್ರ ಮತಾಂಧತೆಯನ್ನು ಹೋಗಲಾಡಿಸಬಲ್ಲ ಬೆಳಕು ನಮಗೆ ಕಾಣಬಹುದು.

> ಸಂಕುಚಿತ ಪಂಥಭಾವನೆ, ಸ್ವಮತಾಭಿಮಾನ, ಅದರ ಭೀಕರ ಸಂತಾನವಾದ ಮತಾಂಧತೆ – ಇವು ಈ ಸುಂದರವಾದ ಪೃಥ್ವಿಯನ್ನು ಬಹುಕಾಲದಿಂದ ಬಾಧಿಸುತ್ತಿವೆ. ಇವು ಈ ಭೂಮಿಯನ್ನು ಹಿಂಸೆಯಿಂದ ತುಂಬಿವೆ. ಅದನ್ನು ಮತ್ತೆ ಮತ್ತೆ ಜನರ ರಕ್ತದಿಂದ ತೋಯಿಸಿವೆ. ನಾಗರಿಕತೆಯನ್ನು ನಾಶಗೊಳಿಸಿವೆ. ರಾಷ್ಟ್ರಗಳನ್ನೇ ನಿರಾಶೆಯ ಕೂಪಕ್ಕೆ ತಳ್ಳಿವೆ.
>
> – *ಸ್ವಾಮಿ ವಿವೇಕಾನಂದ*

ಇಪ್ಪತ್ತನೆಯ ಶತಮಾನದಲ್ಲಿ ವೈಜ್ಞಾನಿಕ ಚಿಂತನೆಗಳು ಹೆಚ್ಚು ಆಪ್ಯಾಯಮಾನವಾದಾಗ, ವೈಚಾರಿಕತೆಯ ಪ್ರಖರತೆಯಿಂದ ಮತಾಂಧತೆಯ ಕಾವು ಅಡಗಬಹುದು ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ರಾಷ್ಟ್ರೀಯತೆ, ಸರ್ವಾಧಿಕಾರ, ಸಮತಾವಾದ ಮುಂತಾದ ಲೌಕಿಕ ರಾಜನೀತಿಯ ವಿಚಾರಗಳಲ್ಲೂ ಸ್ವಮತಾಭಿಮಾನ ತಲೆದೋರಿ ಅವುಗಳ ಪ್ರಭಾವದಿಂದ ಎರಡು ಜಾಗತಿಕ ಯುದ್ಧಗಳೇ ಸಂಭವಿಸಿದವು. ಉಗ್ರ ಧಾರ್ಮಿಕ ನಂಬಿಕೆಗಳಷ್ಟೇ ವಿನಾಶಕಾರಿಯಾದ ಈ ಸಾಮಾಜಿಕ ಧೋರಣೆಗಳಿಂದ ಇಂದಿನ ರಾಜಕೀಯವು ಮಲಿನಗೊಂಡಿರುವುದಷ್ಟೇ ಅಲ್ಲ, ಜೊತೆಗೆ ಧರ್ಮವನ್ನೂ ಬಳಸಿಕೊಂಡು ಸಮಾಜವನ್ನು ಮತ್ತಷ್ಟು ವಿಚ್ಛಿದ್ರಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿವೆ. ಸಾಮಾಜಿಕ ಸ್ಥಿರತೆಯನ್ನು ಕಾಪಾಡಿ ಪ್ರಗತಿಪರ ಕಾನೂನುಗಳನ್ನು ರೂಪಿಸಬೇಕಾದ ಸರ್ಕಾರಗಳೇ ತಮ್ಮ ಅಧಿಕಾರಲಾಲಸೆಯಿಂದ ಧರ್ಮವನ್ನೇ ಸಾಧನವನ್ನು ಮಾಡಿಕೊಂಡಿರುವುದು ಮತ್ತಷ್ಟು ಚಿಂತೆ ಗೊಂದಲಗಳಿಗೆ ದಾರಿಮಾಡಿಕೊಡುತ್ತಿದೆ.

ವಿಜ್ಞಾನವು ಇಷ್ಟು ವ್ಯಾಪಕವಾಗಿ ಬಳಕೆಯಾಗುತ್ತಿದ್ದರೂ, ಶಿಕ್ಷಣ ಕ್ಷೇತ್ರ ಹಾಗೂ ದೃಶ್ಯ ಮಾಧ್ಯಮಗಳ ಮೂಲಕ ಇತರ ಜನಾಂಗಗಳ, ಸಂಸ್ಕೃತಿಗಳ ಪರಿಚಯವಾಗುತ್ತಿದ್ದರೂ ನಮ್ಮಲ್ಲಿ

> ಧರ್ಮಾಂಧತೆಯ ದಾನವರು ಇಲ್ಲದೆ ಹೋಗಿದ್ದರೆ ಮಾನವ ಸಮಾಜ ಈಗಿರುವುದಕ್ಕಿಂತಲೂ ಎಷ್ಟೋ ಪಾಲು ಮುಂದುವರಿದಿರುತ್ತಿತ್ತು.
> – ಸ್ವಾಮಿ ವಿವೇಕಾನಂದ

ವಿಚಾರಶೀಲತೆ ಏಕೆ ಅಗ್ರಸ್ಥಾನವನ್ನು ಗಳಿಸಲಿಲ್ಲ? ತೋರಿಕೆಯ ವಿಚಾರ ವಂತಿಕೆಯ ಹಿನ್ನೆಲೆಯಲ್ಲಿ ಮಾನವ ತನ್ನ ಹಳೆಯ ಮೌಢ್ಯಗಳನ್ನೇ ಮುಂದು ವರಿಸುತ್ತಿರುವಂತಿದೆ. ತಾನು ಮಾಡು ತ್ತಿರುವುದೆಲ್ಲ ಸರಿ ಎಂದು ವಾದಿಸುತ್ತ ತನ್ನನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಮಾನವನು ವಿಚಾರಶಕ್ತಿಯನ್ನು ಬಳಸುತ್ತಿದ್ದಾನೆ ಅಷ್ಟೆ. ತನ್ನ ನಂಬಿಕೆಗಳನ್ನು ಬಿಡಲು ಬಯಸದೆ, ಹಾಗೆ ಬಿಟ್ಟುಬಿಟ್ಟರೆ ತಾನು ಶೂನ್ಯನಾಗಿಬಿಡುವನೆಂದು ಭಯಪಡುತ್ತ, ಇತರರ ಹಿರಿಮೆಯನ್ನು ಅಂಗೀಕರಿಸುವ ವಿನಯ, ಸೌಜನ್ಯ, ಪ್ರೌಢತೆ ಗಳನ್ನೂ ಗಳಿಸಿಕೊಳ್ಳದೆ ಮಾನವನು ಎಲ್ಲ ವಲಯಗಳಲ್ಲೂ ಮೂಲಭೂತ ವಾದ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡು ತ್ತಿದ್ದಾನೆ. ಇಂದಿನ ದಿನಗಳಲ್ಲಿ ಮೂಲಭೂತ ವಾದ ಧರ್ಮದ ವಿಷಯದಲ್ಲಿ ಮಾತ್ರವಷ್ಟೇ ಕಂಡುಬರುತ್ತಿಲ್ಲ, ಅದು ಒಂದು ವ್ಯಾಪಕ ಪಿಡುಗೇ ಆಗಿದೆ.

ನಮ್ಮೆಲ್ಲರಲ್ಲೂ ಮಾನವಸಹಜವಾದ ದೋಷಗಳು, ದೌರ್ಬಲ್ಯಗಳು ಇವೆ. ಭಯ, ಆತಂಕ, ಹಿಂಸಾ ಪ್ರವೃತ್ತಿ, ಬಯಕೆ, ಸ್ವಾರ್ಥ – ಇವೆಲ್ಲ ನಮಗೆ ತಿಳಿದಿರುವ ಅವಗುಣ ಗಳು. ತನ್ನ ಮಾತೇ ಸರಿ, ಭಿನ್ನಾಭಿಪ್ರಾಯ ಇರುವವರೆಲ್ಲ ಅಪರಾಧಿಗಳು, ನಿಂದನೀಯರು ಎಂದು ಮೆರೆಯುವ ಅಹಂಕಾರದ ಪರಿಚಯವೂ ನಮಗಿದೆ. ಆದರೆ ಇವನ್ನು ಪ್ರಜ್ಞಾಪೂರ್ವಕವಾಗಿ ಹತ್ತಿಕ್ಕಿ ಉದಾರತೆ, ವಿನಯ, ಕರುಣೆ ಯಂತಹ ಸದ್ಗುಣಗಳನ್ನೂ ಮಾನವ ಪ್ರದರ್ಶಿಸಬಲ್ಲ, ಸತತ ಅಭ್ಯಾಸದಿಂದ ಗಳಿಸಿಕೊಳ್ಳಬಲ್ಲ ಎಂಬುದನ್ನು ನಾವು ಮರೆ ತಂತಿದೆ. ಇದರ ಬಗ್ಗೆ ವೇದಿಕೆಗಳಿಂದ ಬಣ್ಣಬಣ್ಣವಾಗಿ ಮಾತನಾಡಿದರೆ ಸಾಲದು, ನಿರಂತರ ಪ್ರಯತ್ನ ಹಾಗೂ ಬೋಧನೆಗಳಿಂದ ಮಾನವನ ಹೃದಯ ಹಾಗೂ ಮನಸ್ಸುಗಳಲ್ಲಿ ಸುಧಾರಣೆಯನ್ನು ಸಾಧಿಸಬೇಕು.

ಮನುಷ್ಯ ನಿಜಕ್ಕೂ ಏನನ್ನು ಬಯಸುತ್ತಾನೆ? ಸುಖ, ರಕ್ಷಣೆ, ಜೀವನಕ್ಕೊಂದು ಅರ್ಥ ಹಾಗೂ ಭಾವನಾತ್ಮಕ ತೃಪ್ತಿ. ನಮ್ಮ ಸುತ್ತಮುತ್ತಲಿನ ಆಗುಹೋಗುಗಳನ್ನು ಅರ್ಥ ಮಾಡಿಕೊಳ್ಳುತ್ತ, ನಮ್ಮ ಅಂತಃಸತ್ವವನ್ನು ತಿಳಿಯಲು ನಾವೆಲ್ಲ ಪ್ರಯತ್ನಿಸುತ್ತಿರುತ್ತೇವೆ. ಇದು ತಿಳಿದೋ ತಿಳಿಯದೆಯೋ ನಡೆಯುವ ಪ್ರಕ್ರಿಯೆ. ನಾವೀಗ ಇರುವುದಕ್ಕಿಂತಲೂ ದೊಡ್ಡ ದಾಗಿ ಬೆಳೆಯುತ್ತಿರಲು ಸದಾ ಪ್ರಯತ್ನಿಸುತ್ತಿರುತ್ತೇವೆ. ಕೆಲವರು ಅದನ್ನು ಕೆಲ ವಸ್ತುಗಳ ಸಂಗ್ರಹದಿಂದ ಸಾಧಿಸುತ್ತಿದ್ದರೆ, ಮತ್ತೆ ಕೆಲವರು ಯಾವುದೋ ಪಂಗಡ, ಗುಂಪು, ಕೋಮು ಅಥವಾ ಧರ್ಮದೊಂದಿಗೆ ತಮ್ಮನ್ನು ಒಂದಾಗಿ ಭಾವಿಸಿ ರಕ್ಷಣೆ ಪಡೆಯುತ್ತಾರೆ. ಹಾಗೂ ತಮ್ಮ ಅಲ್ಪತ್ವ ವನ್ನು ಮೀರಲು ಪ್ರಯತ್ನಿಸುತ್ತಿರುತ್ತಾರೆ.

ಯಾವುದೇ ಸಮುದಾಯದ ಅತಿ ಮುಖ್ಯ ಸಾಮಾಜಿಕ ಮೌಲ್ಯವೆಂದರೆ ಆಯಾ ಸಮಾಜದ ವ್ಯಕ್ತಿಗಳಿಗೆ ಅದು ನೀಡುವ ಸ್ಥಾನಮಾನ ಎಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಸಮಾಜದ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಗೆ ನೀಡುವ ಅಂತಸ್ತು ಆಯಾ ಸಮಾಜದ ಸ್ಥಿರತೆಗೆ ಕಾರಣವಾಗುತ್ತದೆ. ಕುಟುಂಬ, ಲಿಂಗ, ವಯಸ್ಸು, ಸಂಪತ್ತು, ಅಧಿಕಾರ, ಪರಿಣತಿ ಅಥವಾ ಪ್ರಸಿದ್ಧಿ – ಹೀಗೆ ಯಾವುದಾದರೂ ಒಂದು ಅಂಶ ಅಥವಾ ಒಂದೆರಡು ಅಂಶ ಗಳನ್ನು ಬಳಸಿಕೊಂಡು ಮಾನವ ಅಂತಸ್ತನ್ನು ಬಯಸುತ್ತಾನೆ. ಯುವಕರು ಗಂಪುಗಟ್ಟಿ ಮಾತನಾಡುತ್ತಿದ್ದರೆ, ವಯಸ್ಕರು ಪಾರ್ಕಿನ ಬೆಂಚಿನ ಮೇಲೆ ಕುಳಿತು ಕಾಲಹರಣ ಮಾಡುವುದಿಲ್ಲವೇ? ಹೀಗೆ ಎಲ್ಲರೂ ಯಾವುದಾದರೂ ಒಂದು ಗುಂಪು ಅಥವಾ ಪಂಗಡಕ್ಕೆ ಸೇರುವುದರ ಮೂಲಕ ತಮ್ಮ ಅಂತಸ್ತನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಸಮಾಜದಲ್ಲಿ ಒಂದು ಧರ್ಮ ಅಥವಾ ಪಂಥ ಪ್ರಬಲವಾಗಿದ್ದರೆ, ಅದಕ್ಕೆ ಸೇರಿದವರು, ತಾವೇ ಹೆಚ್ಚಿನವರು ಎಂದು ಭಾವಿಸುತ್ತಾರೆ.

ಮಾನವನು ಸದಾ ಬಯಸುವುದು ಇವುಗಳನ್ನೇ– ಅಂತಸ್ತು, ಗೌರವ ಹಾಗೂ ಹಿರಿಮೆ. ಇಡೀ ಸಮಾಜ ಹಾಗೂ ತನ್ನ ಸುತ್ತಲಿನ ಜನರು ತನ್ನನ್ನು ಗುರುತಿಸಬೇಕು, ತನ್ನ ಸಾಧನೆಗೆ ಮನ್ನಣೆ ನೀಡಬೇಕು ಎಂದು ಬಯಸಿ ತಮ್ಮಲ್ಲಿರುವ ಸೃಜನ ಶೀಲತೆಯನ್ನು ಹೊರತಂದು ಕೆಲವರು ಸಾಹಿತಿಗಳಾಗುತ್ತಾರೆ, ಕವಿಗಳಾಗುತ್ತಾರೆ, ಭಾಷಣಕಾರರಾಗುತ್ತಾರೆ, ವಿಜ್ಞಾನಿಗಳಾಗುತ್ತಾರೆ. ಮತ್ತೆ ಕೆಲವರು ಅಮಾನವೀಯ ಕೃತ್ಯಗಳ ಮೂಲಕ, ಹಿಂಸೆಯ ಮೂಲಕ ಪ್ರಸಿದ್ಧಿಯನ್ನು ಗಳಿಸಲು ಪ್ರಯತ್ನಿಸುತ್ತಾರೆ. ಎರಡನೇ ಗುಂಪಿಗೆ ಸೇರಿದವರು ತಮ್ಮ ಆಂತರಿಕ ಶೂನ್ಯತೆಯನ್ನು ತುಂಬಲು ಇಂತಹ ನಿಷೇಧಾತ್ಮಕ ಕ್ರಿಯೆಗಳಲ್ಲಿ ತೊಡಗುತ್ತಾರೆ. ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲು ಅದಕ್ಕೊಂದು ಧಾರ್ಮಿಕ ರಂಗನ್ನು ಹಚ್ಚಿ ಅತ್ಯಂತ ಸುಲಭವಾಗಿ ತಮ್ಮ ಜೀವನಕ್ಕೆ ಒಂದು ಅರ್ಥವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ! ಇದನ್ನು Martyr's Complex – ಹುತಾತ್ಮಭಾವ ಎನ್ನುತ್ತಾರೆ. ಉಗ್ರಗಾಮಿ ಗಳಲ್ಲಿ ಹೆಚ್ಚಿನವರು ಯುವಕರೇ ಆಗಿರುವುದು ಕುತೂಹಲ ಕಾರಿಯಷ್ಟೇ ಅಲ್ಲ, ವಿಷಾದನೀಯವೂ ಹೌದು. ಜೀವನದ

ಹೊಸ್ತಿಲಿನಲ್ಲಿರುವ ಇವರು ಸಾರ್ಥಕತೆಯನ್ನು ಇಂತಹ ನಿಷೇಧಾತ್ಮಕ ಕ್ರಿಯೆಗಳ ಮೂಲಕ ಕಂಡುಕೊಳ್ಳುವುದು ಏಕೆ?

ಇತರರಿಗಿಂತ ನಾನು ಉತ್ತಮ ಎಂದೆನಿಸಿಕೊಳ್ಳಲು ಪ್ರೇರಣೆ ನೀಡುವ 'ಅಹಂ' ಎಲ್ಲರಲ್ಲೂ ಇರುತ್ತದೆ. ಸಮಾಜ ಯಾರನ್ನು ಸಮರ್ಪಕವಾಗಿ ಗುರುತಿಸುವುದಿಲ್ಲವೋ ಅಂತಹವರು ತಮ್ಮದೇ ಆದ ಸಣ್ಣ ಸಮಾಜಗಳನ್ನು, ಕ್ಲಬ್ಬುಗಳನ್ನು ತಯಾರಿಸಿಕೊಂಡು ಅದರಲ್ಲಿ ಒಂದು ಮುಖ್ಯ ಸ್ಥಾನ ಅಥವಾ ಗೌರವವನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಆದ್ದರಿಂದ ಒಂದು ಸಮಾಜದಲ್ಲಿ ಉಂಟಾಗುವ ಉಗ್ರಗಾಮಿಗಳಿಗೆ ಆ ಸಮಾಜದಲ್ಲಿರುವ ಅಸಮ ಗೌರವವೇ ಕಾರಣ. ಥಾಮಸ್ ಫ್ರೀಡ್‌ಮನ್ ಎಂಬ ಪ್ರಸಿದ್ಧ ಚಿಂತಕನ ಪ್ರಕಾರ, "ಅವಮಾನವೇ ಮೂಲ ಕಾರಣ. ಹಣದ ಕೊರತೆಯಿಂದ ಆತಂಕವಾದಿಗಳ ಸೃಷ್ಟಿಯಾಗುವುದಿಲ್ಲ. ಘನತೆಯ ಕೊರತೆಯಿಂದ ಇವರ ಉದ್ಭವವಾಗುತ್ತದೆ. ಮಾನವೀಯ ಸಂಬಂಧಗಳಲ್ಲಿ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ನಾವು ಅವಮಾನದ ಪಾತ್ರವನ್ನು ಕಡೆಗಣಿಸಿದ್ದೇವೆ. ಯಾವುದೇ ದೇಶ ಅಥವಾ ಜನಾಂಗ ಅವಮಾನವನ್ನು ಅನುಭವಿಸಿದಾಗ ವಿಪರೀತ ಪ್ರತಿಕ್ರಿಯೆಯನ್ನು ಅವರು ವ್ಯಕ್ತಪಡಿಸುತ್ತಾರೆ ಹಾಗೂ ಹಿಂಸಾತ್ಮಕ ಕ್ರಿಯೆಗಳಲ್ಲಿ ತೊಡಗುತ್ತಾರೆ." (Friedman Thomas, The World Is Flat, *New York*, Farrar, Straus and Giroux, 2006, p. 488).

ಆರ್ಥಿಕವಾಗಿ ಹಿಂದುಳಿದವರು, ಅಗೌರವವನ್ನು ಅನುಭವಿಸಿದ ಶೋಷಿತರು, ಇತರರ ಬಗ್ಗೆ, ಉಳ್ಳವರ ಬಗ್ಗೆ ಅಸಮಾಧಾನವನ್ನು ಬೆಳೆಸಿಕೊಂಡು, ಅದಕ್ಕೆ ಪೋಷಣೆಯನ್ನು ನೀಡುತ್ತ ತಮ್ಮ ದ್ವೇಷ, ಬೇಗುದಿಗಳಲ್ಲಿ ಸಾಂತ್ವನ ಹೊಂದುತ್ತಾರೆ. ಮತ್ತೆ ಮತ್ತೆ ಆ ಘಟನೆಗಳನ್ನು ನೆನಪಿಸಿಕೊಳ್ಳುತ್ತ ತಮ್ಮ ಕೋಪವನ್ನು ಸಮರ್ಥಿಸಿಕೊಂಡು ಅದನ್ನು ಹೆಚ್ಚಿಸಿಕೊಳ್ಳುತ್ತಲೇ ಇರುತ್ತಾರೆ. ಕುಪಿತನಾದ ವ್ಯಕ್ತಿಯ ಬುದ್ಧಿ ಕೆಲಸಮಾಡುವುದಿಲ್ಲ. ಭಾವನಾತ್ಮಕ ಪ್ರಚೋದನೆಯಿಂದ ಕುರುಡಾಗಿ, ಮಾಡಬಾರದ್ದನ್ನು ಮಾಡಿ, ತನಗಾದ ಅನ್ಯಾಯಕ್ಕೆ ಸೂಕ್ತ ಪ್ರತಿಕ್ರಿಯೆ ವ್ಯಕ್ತಪಡಿಸಿರುವೆನೆಂದು ಭಾವಿಸುತ್ತಾನೆ. ತಮ್ಮ ಸಾಮಾಜಿಕ ಅಸಹಾಯಕತೆ, ಬಿಕ್ಕಟ್ಟುಗಳಿಂದ ಹೊರಬರಲು ಪ್ರಯತ್ನಿಸುತ್ತಿರುವ ಇಂತಹವರಿಗೆ ನೆಲೆಯನ್ನು ಕಲ್ಪಿಸಿಕೊಟ್ಟು, ಅಸಮತೋಲನೆಯನ್ನು ತೊಲಗಿಸುವುದೇ ಇದಕ್ಕೆ ಪರಿಹಾರ.

ಇಡೀ ಪ್ರಪಂಚದಲ್ಲಿ ೧೫ ರಿಂದ ೨೪ರ ಒಳಗಿನ ವಯಸ್ಸಿನ ಯುವಕರಲ್ಲಿ ಸುಮಾರು ೬೦ ಮಿಲಿಯನ್ ಜನ ನಿರುದ್ಯೋಗಿಗಳಂತೆ! ಇದರ ಕಾಲು ಭಾಗ ಅರಬ್ ಹಾಗೂ ಇನ್ನಿತರ ಹಿಂದುಳಿದ ದೇಶಗಳಲ್ಲಿ ಇದ್ದಾರಂತೆ. ಒಂದು ಸಮೀಕ್ಷೆಯ ವರದಿಯಂತೆ ಇಂದಿನ ಎಲ್ಲ ಜಾಗತಿಕ ಸಮಸ್ಯೆಗಳಿಗೂ ವ್ಯವಸ್ಥೆಯ ಅಸಮಾನತೆಗಳೇ ಕಾರಣ. 'ಶೋಷಿತರು' ಎಂಬ ಹಣೆಪಟ್ಟಿ ಹೊಂದಿರುವವರೆಲ್ಲರೂ ವ್ಯವಸ್ಥೆಯ ವಿರುದ್ಧ ಇಂದಲ್ಲ ನಾಳೆ ಪ್ರತಿಭಟಿಸುವುದು ಸಹಜವೇ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಸತ್ಯದ ಏಕತೆ ಹಾಗೂ ಪ್ರತಿಯೊಬ್ಬನಲ್ಲೂ ಇರುವ ಅದೇ ಸತ್ಯದ ಅಭಿವ್ಯಕ್ತಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದು. ಇದರ ಆಧಾರದ ಮೇಲೆ ಮಾತ್ರ ಸಮಾನತೆಯನ್ನು ಸಾಧಿಸಬಹುದು ಎಂದೇ ಅವರು ಪ್ರತಿಪಾದಿಸಿದರು. ಉಳಿದೆಲ್ಲ ವ್ಯವಸ್ಥೆಗಳೂ ಮನುಷ್ಯರಲ್ಲಿರುವ ಭಿನ್ನತೆಗಳನ್ನು ಗುರುತಿಸಿ, ವ್ಯಕ್ತಿಯ ಒಂದು ಅಂಶವನ್ನು ಸ್ವೀಕರಿಸಿದರೆ ಅದರೊಂದಿಗೇ ಅವನಲ್ಲಿರುವ ಹತ್ತು ಇತರ ಅಂಶಗಳನ್ನು ತಿರಸ್ಕರಿಸುತ್ತವೆ. ಕೀಳರಿಮೆಯಿಂದ ಹುಟ್ಟುವ ದ್ವೇಷ ಇತ್ಯಾದಿ ಭಾವನೆಗಳು ಹೋಗಬೇಕಾದರೆ ಮಾನವರಲ್ಲಿನ ಮೂಲಸ್ವರೂಪವಾದ ಏಕತೆಯನ್ನು ಗುರುತಿಸಿದಾಗ ಮಾತ್ರ ಸಾಧ್ಯ.

---

**ಜಗತ್ತಿನಲ್ಲಿ ಎಂದಿಗಾದರೂ ಒಂದು ವಿಶ್ವಧರ್ಮ ಎನ್ನುವುದು ಅಸ್ತಿತ್ವಕ್ಕೆ ಬರುವುದಾದರೆ ಅದು ಕಾಲ ದೇಶಗಳ ಎಲ್ಲೆಯನ್ನು ಮೀರಿರುವಂಥದ್ದಾಗಿರಬೇಕು. ಎಲ್ಲ ಧರ್ಮಗಳ ಮೊತ್ತವಾಗಿರಬೇಕು. ಹಾಗೆ ಆಗಿದ್ದೂ ಬೆಳವಣಿಗೆಗೆ ಅದರಲ್ಲಿ ಅನಂತ ಅವಕಾಶವಿರಬೇಕು. ಯಾವ ಭೇದವೂ ಇಲ್ಲದೆ ಎಲ್ಲರನ್ನೂ ತಮ್ಮವರಾಗಿಸಿಕೊಳ್ಳುವಂತೆ ಇರಬೇಕು, ಪ್ರತಿಯೊಬ್ಬ ಸ್ತ್ರೀಪುರುಷರಲ್ಲಿಯೂ ಇರುವ ದಿವ್ಯತೆಯನ್ನು ಗುರುತಿಸಿ ಮಾನವತೆಯು ತನ್ನ ನೈಜ, ದಿವ್ಯ ಸ್ವಭಾವವನ್ನು ಅರಿಯಲು ನೆರವಾಗುವಂತಿರಬೇಕು.**

*– ಸ್ವಾಮಿ ವಿವೇಕಾನಂದ*

---

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಸೆಪ್ಟೆಂಬರ್ 2007**

| | | |
|---|---|---|
| 03 | **ಸೋಮವಾರ** | ಶ್ರೀಕೃಷ್ಣ ಜನ್ಮಾಷ್ಟಮಿ |
| 07 | **ಶುಕ್ರವಾರ** | ಏಕಾದಶಿ |
| 10 | **ಸೋಮವಾರ** | ಸ್ವಾಮಿ ಅದ್ವೈತಾನಂದ ಜಯಂತಿ |
| 15 | **ಶನಿವಾರ** | ಗಣೇಶ ಚತುರ್ಥಿ |
| 23 | **ಭಾನುವಾರ** | ಏಕಾದಶಿ |

ಪ್ರತಿ ಭಾನುವಾರ ಕನ್ನಡದಲ್ಲಿ ಮತ್ತು ಶನಿವಾರ ಇಂಗ್ಲಿಷಿನಲ್ಲಿ ಸಂಜೆ **6 ರಿಂದ 7 ರವರೆಗೆ** ಆಶ್ರಮದ ಸಭಾಂಗಣದಲ್ಲಿ ಪ್ರವಚನಗಳಿರುತ್ತವೆ.